**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂ ನ್ಯಾಯಾಲಯ ಶಹಾಪೂರ.**

**ಚಾಸಾ ಃ 05 ಪ್ರಾಸಾ ಃ 02**

| | | |
|---|---|---|
| ಹೆಸರು | ಃ | ವಿಶ್ವರಾಧ್ಯ |
| ತಂದೆ/ ಗಂಡನ ಹೆಸರು | ಃ | ಚಂದ್ರಾಮಪ್ಪ |
| ವಯಸ್ಸು | ಃ | **37** ವರ್ಷ |
| ಉದ್ಯೋಗ | ಃ | ಖಾಸಗಿ ಕೆಲಸ |
| ವಾಸ | ಃ | ಹಳಿಸಗರ |

**ದಿನಾಂಕಃ 10.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಶ್ರೀ. ಎಪಿಪಿ ರವರಿಂದಃ**

ಚಾಸಾ-1 ಗೊತ್ತಿಲ್ಲ, ಚಾಸಾ-4 ರವರು ಗೊತ್ತು, ಚಾಸಾ-6 ಗೊತ್ತು, ಆರೋಪಿತರು ಗೊತ್ತಿಲ್ಲ.  ದಿನಾಂಕಃ 19.08.2024 ರಂದು ಬೆಳಿಗ್ಗೆ 06.30 ಗಂಟೆಗೆ ಜಗಳ ಶಬ್ದ ಬಂದಿದ್ದರಿಂದ ನಾನು ಹೋಗಿ ನೋಡಿದಾಗ 1 ಮತ್ತು 2 ನೇ ಆರೋಪಿತರು ಚಾಸಾ-1 ರವರಿಗೆ ಹೊಡೆಯುತ್ತಿದ್ದರು, 1 ನೇ ಆರೋಪಿ ಚಾಸಾ-1 ರವರ ಸೀರೆ ಎಳೆದಾಡಿರುತ್ತಾನೆ. ನಾನು ಜಗಳವನ್ನು ಬಿಡಿಸಿರುತ್ತೇನೆ.  ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

**(ಈ ಹಂತದಲ್ಲಿ ಎಪಿಪಿ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಎಪಿಪಿ ಯವರಿಂದಃ**

1ನೇ ಆರೋಪಿತನು ಚಾಸಾ-1 ರವರಿಗೆ ನೆಲಕ್ಕೆ ಕೆಡವಿ ಅಲ್ಲಿ ಇದ್ದ ಒಂದು ಕಲ್ಲಿನಿಂದ ಆಕೆಯ ಹಣೆಯ ಮೇಲ್ಭಾಗಕ್ಕೆ ಹೊಡೆದು ರಕ್ತ ಪಡಿಸಿದನು ಎಂದರೆ ಸರಿ. 1 ಮತ್ತು 2ನೇ ಆರೋಪಿತರು ಚಾಸಾ-1 ರವರಿಗೆ ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿ. ಆರೋಪಿತರು ಚಾಸಾ-1 ರವರಿಗೆ ನಮ್ಮ ತಂಟೆಗೆ ಬಂದರೆ ಜೀವ ಸಹಿತ ಬಿಡವುದಿಲ್ಲ ಎಂದು ಜೀವ ಬೇದರಕೆ ಹಾಕಿರುತ್ತಾರೆ ಎಂದರೆ ಸರಿ. 3 ಮತ್ತು 4ನೇ ಆರೋಪಿತರು ಚಾಸಾ-1 ರವರಿಗೆ ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ. ಹೆಚ್.ಕೆ.ವಿ. ವಕೀಲರಿಂದಃ**

ಆರೋಪಿತರ ಮನೆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮೀನುಗಾರ ಓಣಿಯ ರಸ್ತೆ ಮೇಲೆ ಜಗಳವಾಗಿರುತ್ತದೆ. ಘಟನಾ ಸ್ಥಳ ಸೂತ್ತ ಮುತ್ತಲೂ ಮನೆಗಳು ಇವೆ ಎಂದರೆ ಸರಿ, ಅಲ್ಲಿ ಸುಮಾರು ನೂರಾರು ಜನರು ವಾಸಿಸುತ್ತಾರೆ ಎಂದರೆ ಸರಿ. ನನ್ನ ಮನೆ ಹಳಿಸಗರದಲ್ಲಿ ಇರುತ್ತದೆ, ನನ್ನ ಮನೆ ಜಗಳ ಸ್ಥಳದಿಂದ ಸುಮಾರು ಅರ್ಧ ಕಿ.ಮೀ.ಕ್ಕಿಂತ ಕಡಿಮೆ ಇರುತ್ತದೆ. ದೂರು ನೀಡಿದ ವ್ಯಕ್ತಿ ಹೆಸರು ನನಗೆ ಗೊತ್ತಿಲ್ಲ. ಚಾಸಾ-1 ರವರು ಆರೋಪಿತರು ಸಂಬಂಧಿಕರು ಎಂದರೆ ನನಗೆ ಗೊತ್ತಿಲ್ಲ. ಹಳಿಸಗರ ನಿವಾಸಿ ಶೇಖಪ್ಪ ನನಗೆ ಗೊತ್ತು, ಆತ ಹಂದಿ ಹಿಡಿಯುವ ಕೆಲಸ ಮಾಡುತ್ತಾನೆ ಎಂದರೆ ಸರಿ. ಶೇಖಪ್ಪ ಹಾಗೂ ಆರೋಪಿತರಿಗೆ ಜಗಳ ಆಗಿರುತ್ತದೆ ಎಂದರೆ ಸರಿ. ಶೇಖಪ್ಪ ವಿರುದ್ದ ಜಾತಿನಿಂಧನಿ ಪ್ರಕರಣ ಜಿಲ್ಲಾ ನ್ಯಾಯಾಲಯದಲ್ಲಿ ನಡೆಯುತ್ತಿದೆ ಎಂದರೆ ಸರಿ.

2ನೇ ಆರೋಪಿ ದೂರು ಸಲ್ಲಿಸಿರುತ್ತಾನೆ ಎಂದರೆ ಸರಿ. ಚಾಸಾ-1 ರವರ ಗಂಡ ಹಾಗೂ ಶೇಖಪ್ಪ ಆತ್ಮಿಯ ಗೆಳೆಯರು ಎಂದರೆ ನನಗೆ ಗೊತ್ತಿಲ್ಲ. ಶೇಖಪ್ಪ ಲಕ್ಷ್ಮೀಯನ್ನು ಮುಂದೆ ಮಾಡಿ ಆರೋಪಿತರ ವಿರುದ್ದ ಆರೋಪಿತರ ವಿರುದ್ದ ಪ್ರಕರಣ ದಾಖಲಿಸಿದ್ದ ಎಂದರೆ ಸರಿಯಲ್ಲ. ನಾನು ಹೋದಾಗ ಜಗಳ ನಡೆದಿತ್ತು. ನನ್ನನ್ನು ಬಿಟ್ಟು ಅಲ್ಲಿ ಎಷ್ಟು ಜನರು ಇದ್ದರು ಎಂದು ನನಗೆ ನೆನಪಿಲ್ಲ. ಜಗಳದಲ್ಲಿ 1 ಮತ್ತು 2ನೇ ಆರೋಪಿತರು ಇದ್ದರು, 3 ಮತ್ತು 4ನೇ ಆರೋಪಿತರು ಇರಲಿಲ್ಲ. 1ನೇ ಆರೋಪಿ ಚಾಸಾ-1 ರವರಿಗೆ ಕೈಯಿಂದ ಹೊಡೆದಿರುತ್ತಾನೆ. ಚಾಸಾ-1 ರವರಿಗೆ ರಕ್ತ ಬಂದಿರುತ್ತದೆ, ರಕ್ತ ಹೇಗೆ ಬಂದಿರುತ್ತೆ

ಎಂದು ನನಗೆ ಗೊತ್ತಿಲ್ಲ. 2ನೇ ಆರೋಪಿ ಚಾಸಾ-1 ರವರಿಗೆ ಬೈಯುತ್ತಿದ್ದನು. ಜಗಳ ಸುಮಾರು 5 ನಿಮೀಷಗಳವರೆಗೂ ಆಗಿರುತ್ತದೆ. ಪೊಲೀಸರು ಹೇಳಿಕೆ ಸಲುವಾಗಿ ಕರೆದಿರುತ್ತಾರೆ. ಜಗಳವಾಗಿ 2-3 ದಿನಗಳ ನಂತರ ಕರೆದಿರುತ್ತಾರೆ. ಪೊಲೀಸರು ನಾನು ಹೇಳಿದಾಗ ನನ್ನ ಹೇಳಿಕೆಯನ್ನು ಬರೆದುಕೊಂಡಿರುತ್ತಾರೆ. ಯಾವುದೇ ಜಗಳ ಆಗಿರುವುದಿಲ್ಲ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ ಇದೆ.**

**ಪ್ರಧಾನ ಜೆ.ಎಂ.ಎಫ್.ಸಿ. ಶಹಾಪೂರ**